**ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ**
**ದಂಡಾಧಿಕಾರಿಗಳ ನ್ಯಾಯಾಲಯ, ದಾಂಡೇಲಿ**
**ಕ್ರಿಮೀನಲ್ ಮೊಕದ್ದಮೆ ನಂ. 590/2024.**

**ಚಾಸಾ-07**

**ಪ್ರಾಸಾ- 03**

(ಸಾಕ್ಷಿಗೆ ಮರಾಠಿ ಭಾಷೆ ಮಾತ್ರ ಗೊತ್ತಿರುವುದರಿಂದ ಕನ್ನಡ ಭಾಷೆಯಲ್ಲಿ ಕೇಳುವ ಪ್ರಶ್ನೆಗಳನ್ನು ಸಾಕ್ಷಿಗೆ ಮರಾಠಿ ಭಾಷೆಗೆ ಭಾಷಾಂತರಿಸಿ ಸಾಕ್ಷಿ ಮರಾಠಿ ಭಾಷೆಯಲ್ಲಿ ಹೇಳುವ ಉತ್ತರವನ್ನು ಕನ್ನಡ ಭಾಷೆಗೆ ಭಾಷಾಂತರಿಸಲು ಶ್ರೀಮತಿ. ಆರ್.ಎನ್.ಎಮ್. ವಕೀಲರನ್ನು ಭಾಷಾಂತಕಾರರನ್ನಾಗಿ ನೇಮಿಸಲಾಯಿತು ಮತ್ತು ಅವರಿಗೆ ಸತ್ಯ ಪ್ರತಿಜ್ಞೆ ಮೇಲೆ ಸಾಕ್ಷಿಗೆ ಪ್ರಮಾಣ ವಚನವನ್ನು ಭೋಧಿಸಲಾಯಿತು)

**ಸಾಕ್ಷಿಗೆ ದಿನಾಂಕ 14-11-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಸಾಕ್ಷಿಯ ಹೆಸರು | ಃ ರಾಮಚಂದ್ರ ತಂಃ ಗೋವಿಂದ ಹಳಬ |
| ವಯಸ್ಸು | ಃ 57 ವರ್ಷ |
| ಉದ್ಯೋಗ | ಃ ಚಹಾದಂಗಡಿ ಕೆಲಸ |
| ವಾಸಸ್ಥಳ | ಃ ಜಗಲಪೇಟೆ |

**ಮುಖ್ಯವಿಚಾರಣೆ ಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ**

1. ಚಾಸಾ-1, 6 ಮತ್ತು ಮೃತ ನೇತಾಜಿ ಪಾಟೀಲ ನನಗೆ ಗೊತ್ತು. ದಿಃ 07-01-2024 ರಂದು ಸಂಜೆ 06-00 ರಿಂದ 06-30 ಗಂಟೆ ಸಮಯದಲ್ಲಿ ಜೋಯಿಡಾ-ರಾಮನಗರ ರಸ್ತೆಯಲ್ಲಿ ವಾಕಿಂಗ್ ಮಾಡುತ್ತಿದ್ದಾಗ, ಆರೋಪಿಯು ತನ್ನ ಬೈಕ್ ನಂಃ ಕೆಎ-24/3795 ನೇದನ್ನು ರಾಮನಗರದಿಂದ ಜೋಯಿಡಾ ಕಡೆಗೆ ಬರುತ್ತಿದ್ದಾಗ, ಮೃತ ನೇತಾಜಿ ಮತ್ತು ಅವರ ಹೆಂಡತಿಯಾದ ಚಾಸಾ-6 ರವರು ಅವರ ದ್ವಿ ಚಕ್ರ ವಾಹನ ನಂಃಕೆಎ-30/ಜೆ-3028 ರಲ್ಲಿ ಸಿಂಗರಗಾಂವ ಕ್ರಾಸ್ ನ್ನು ದಾಟಿ ರಾಮನಗರದ ಮುಖ್ಯ ರಸ್ತೆಯನ್ನು ದಾಟಿ, ಜಗಲಪೇಟೆಗೆ ಹೋಗುವಾಗ, ಮುಖ್ಯ ರಸ್ತೆಯ ಮೇಲೆ ಆರೋಪಿಯು ತನ್ನ ಬೈಕ್ ನಂಃ ಕೆಎ-24/3795 ನೇದನ್ನು ವಾಹನ ನಂಃಕೆಎ-30/ಜೆ-3028 ನೇದಕ್ಕೆ ಡಿಕ್ಕಿ ಪಡಿಸಿದ್ದರಿಂದ ಅಪಘಾತವಾಗಿರುತ್ತದೆ.
2. ಆ ದಿನ ಆರೋಪಿಯು ತನ್ನ ದ್ವಿ ಚಕ್ರ ವಾಹನವನ್ನು ಸಾರ್ವಜನಿಕ ಸ್ಥಳದಲ್ಲಿ ಅತೀ

ವೇಗವಾಗಿ ಮತ್ತು ಅಜಾಗೂರುಕತೆಯಿಂದ ಚಲಾಯಿಸಿಕೊಂಡು ಬಂದು, ನಾವು ಮೃತ ನೇತಾಜಿಯವರು ಚಲಾಯಿಸುತ್ತಿದ್ದ ವಾಹನಕ್ಕೆ ಡಿಕ್ಕಿ ಪಡಿಸಿದ್ದರಿಂದ ಸದರಿ ಅಪಘಾತವಾಗಿರುತ್ತದೆ.

3. ಸದರಿ ಅಪಘಾತದಿಂದ ಮೃತ ನೇತಾಜಿಯವರಿಗೆ ತಲೆಗೆ ಗಂಭೀರ ಪೆಟ್ಟಾಗಿತ್ತು, ಚಾಸಾ-6 ರವರಿಗೂ ಸಹ ತಲೆಗೆ ಪೆಟ್ಟಾಗಿತ್ತು. ನಂತರ ಅಲ್ಲಿ ಸೇರಿದ್ದ ಜನರು ನನ್ನ ನೇತಾಜಿಯವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ ಮತ್ತು ಚಾಸಾ-6 ರವರನ್ನು ಅಲ್ಲಿಯೇ ಊರಿನಲ್ಲಿದ್ದ ವೈದ್ಯರಿಗೆ ತೋರಿಸಿರುತ್ತಾರೆ. ಅಪಘಾತದ ನಂತರ ಆರೋಪಿಗೂ ಸಹ ಪೆಟ್ಟಾಗಿದ್ದು, ಅವನು ಸಹ ಅಲ್ಲಿಯೇ ಬಿದಿದ್ದನು, ಅವನನ್ನು ಸಹ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ನಂತರ ಪೊಲೀಸರು ನನ್ನ ವಿಚಾರಣೆ ಮಾಡಿ, ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ.ಎಸ್.ಪಿ ವಕೀಲರಿಂದ</u>**

4. ನಾನು ಜಗಲಪೇಟೆಯ ಎ.ಸಿ.ಎಫ್ ಕಚೇರಿಯ ಮುಂದೆ ಚಹಾದಂಗಡಿಯನ್ನು ಹೊಂದಿರುತ್ತೇನೆ. ಆ ದಿನ ನಾನೊಬ್ಬನೇ ರಾಮನಗರದ ಕಡೆಗೆ ವಾಕಿಂಗ್ ಹೋಗುತ್ತಿದ್ದೆ. ಸದರಿ ಅಪಘಾತವನ್ನು ನಾನು ಅಂದಾಜು 20 ಮೀಟರ್ ಅಂತರದಿಂದ ನೋಡಿರುತ್ತೇನೆ. ಆ ದಿನ ಮೃತ ನೇತಾಜಿಯವರ ವಾಹನ ನನ್ನ ಹಿಂದಿನಿಂದ ಬರುತ್ತಿತ್ತು ಎಂದರೆ ಸರಿಯಲ್ಲ.

5. ಆ ದಿನ ಮೃತ ನೇತಾಜಿಯವರೇ ತನ್ನ ವಾಹನವನ್ನು ವೇಗವಾಗಿ ಚಲಾಯಿಸಿ, ಆರೋಪಿ ಚಲಾಯಿಸುತ್ತಿದ್ದ ವಾಹನಕ್ಕೆ ಡಿಕ್ಕಿ ಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಆದ್ದರಿಂದ ಅಪಘಾತ ಮೃತ ನೇತಾಜಿಯವರ ತಪ್ಪಿನಿಂದ ಆಗಿರುತ್ತದೆ ಎಂದರೆ ಸರಿಯಲ್ಲ.

6. ಅಪಘಾತವಾದ ರಸ್ತೆಯು ರಾಜ್ಯ ಹೆದ್ದಾರಿಯಾದ ಕಾರಣ, ಅಲ್ಲಿ ಬಹಳಷ್ಟು ವಾಹನಗಳ ಸಂಚಾರ ಇರುತ್ತದೆ ಎಂದರೆ ಸರಿ. ಮೃತ ನೇತಾಜಿಯವರು ಸಿಂಗರಗಾಂವ ಕ್ರಾಸ್ ನಿಂದ ಮುಖ್ಯ ರಸ್ತೆಗೆ ಬರುವಾಗ ಯಾವುದೇ ಸೂಚನೆಯನ್ನು ನೀಡದೆ ವೇಗವಾಗಿ, ಮುಖ್ಯ ರಸ್ತೆ ಬಂದು, ಅದನ್ನು ದಾಟಲು ಪ್ರಯತ್ನಿಸಿದ್ದರಿಂದ ಈ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ.

7. ನಾನು ಮತ್ತು ಮೃತ ನೇತಾಜಿಯವರು ಒಂದೇ ಸಮುದಾಯ ಮತ್ತು ಒಂದೇ

ಊರಿನವರಾದ ಕಾರಣ, ಅವರಿಗೆ ಸಹಾಯ ಮಾಡಲು, ಆರೋಪಿಯ ತಪ್ಪಿಲ್ಲದೇ ಇದ್ದರೂ ಸಹ ಮತ್ತು ಅಪಘಾತ ಮೃತ ನೇತಾಜಿಯವರು ಅಜಾಗೂರುಕತೆಯಿಂದ ಆದರೂ ಸಹಿತ, ಆರೋಪಿಯ ವಿರುದ್ಧ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

8. ಮೃತ ನೇತಾಜಿಯವರ ಹೆಂಡತಿ ಚಾಸಾ-6 ರವರು ಪರಿಹಾರ ಕೋರಿ ಸಲ್ಲಿಸಿದ ಅರ್ಜಿಗೆ ಅನುಕೂಲವಾಗಲೇಂದು ಆರೋಪಿಯ ವಿರುದ್ಧ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತ ನೇತಾಜಿಯವರಿಗೆ ವಾಹನ ಚಾಲನಾ ಪರವಾನಗಿ ಇರಲಿಲ್ಲ ಮತ್ತು ಅವರು ಚಲಾಯಿಸುತ್ತಿದ್ದ ವಾಹನಕ್ಕೆ ವಿಮೆ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಅವರಿಗೆ ವಾಹನ ಚಾಲನೆ ಬರುತ್ತಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ಅಂಶಗಳು ಸುಳ್ಳು ಎಂದರೆ ಸರಿಯಲ್ಲ. ನಾನು ಅಪಘಾತವನ್ನು ನೋಡಿಯೇ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತುಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೆ.ಸರಿ ಅದೆ.**

**ಸಹಿ ಇದೆ/-**

**(ತೇಜಸ್ವಿನಿ ಸೊಗಲದ)**

**ದಿವಾಣಿ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾ. ದಂಡಾಧಿಕಾರಿಗಳು,ದಾಂಡೇಲಿ.**